# B

# CCE RR

**Revised & Un-Revised**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 25. 06. 2018 ] ಸಂಕೇತ ಸಂಖ್ಯೆ : **83-K (Chem.)**

Date : 25. 06. 2018 ] CODE NO. : **83-K (Chem.)**

## ವಿಷಯ : ವಿಜ್ಞಾನ

## Subject : SCIENCE

**(ರಸಾಯನಶಾಸ್ತ್ರ / Chemistry)**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 1. | ಈ ಕೆಳಗಿನವುಗಳಲ್ಲಿ ಸಲ್ಫೈಡ್ ಅದಿರು<br>(A) ಬಾಕ್ಸೈಟ್ (B) ಚಾಲ್ಕೋಪೈರೈಟ್ಸ್<br>(C) ಅಜುರೈಟ್ (D) ಮಾಲಕೈಟ್<br>***ಉತ್ತರ :*** (B) — ಚಾಲ್ಕೋಪೈರೈಟ್ಸ್ | 1 |
| 4. | ಈ ಕೆಳಗಿನವುಗಳಲ್ಲಿ ಚಾರ್ಲ್ಸ್‌ನ ನಿಯಮದ ಒಂದು ಅನ್ವಯವೆಂದರೆ,<br>(A) ವಿಮಾನ ಇದ್ದಕ್ಕಿದ್ದಂತೆ ಮೇಲೇರಿದಾಗ ಪ್ರಯಾಣಿಕರಿಗೆ ಕಿವಿ ನೋವಿನ ಅನುಭವವಾಗುವುದು<br>(B) ತಣ್ಣನೆಯ ಆಹಾರಕ್ಕಿಂತ ಬಿಸಿ ಆಹಾರದ ವಾಸನೆ ನಮ್ಮನ್ನು ಬೇಗ ತಲುಪುವುದು<br>(C) ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಹೆಚ್ಚಾಗಿ ಬಲೂನು ಒಡೆಯುವುದು<br>(D) ಗಾಳಿ ತುಂಬಿದ ಬಲೂನನ್ನು ಮಿತಿಮೀರಿ ಹಿಸುಕಿದಾಗ ಒಡೆಯುವುದು<br>***ಉತ್ತರ :*** (C) — ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಹೆಚ್ಚಾಗಿ ಬಲೂನು ಒಡೆಯುವುದು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ಸಾಮಾನ್ಯ ಸಕ್ಕರೆಯನ್ನು ಉತ್ಪಾದಿಸುವ ನಾಲ್ಕು ಹಂತಗಳನ್ನು ತಪ್ಪಾದ ಕ್ರಮದಲ್ಲಿ ನೀಡಲಾಗಿದೆ.<br>(a) ರಸವನ್ನು ಸಾರವರ್ಧಿಸಿ ಸ್ಫಟಿಕೀಕರಿಸುವುದು<br>(b) ರಸವನ್ನು ಶುದ್ಧೀಕರಿಸುವುದು<br>(c) ಸ್ಫಟಿಕಗಳನ್ನು ಬೇರ್ಪಡಿಸಿ ಶುಷ್ಕನಗೊಳಿಸುವುದು<br>(d) ಆಕರದಿಂದ ರಸವನ್ನು ಹಿಂಡುವುದು<br>*ಈ ಹಂತಗಳ ಸರಿಯಾದ ಜೋಡಣೆ :*<br>(A) b, d, c, a (B) d, a, b, c<br>(C) a, c, d, b (D) d, b, a, c<br>***ಉತ್ತರ :*** (D) — d, b, a, c | 1 |
| 9. | ತಾಮ್ರದ ವೋಲ್ಟಾಮೀಟರ್ ಮೂಲಕ 3A ವಿದ್ಯುತ್‌ಪ್ರವಾಹವನ್ನು 20 ನಿಮಿಷಗಳ ಕಾಲ ಹರಿಸಿದರೆ, ಕ್ಯಾಥೋಡ್‌ನಲ್ಲಿ ನಿಕ್ಷೇಪವಾಗುವ ತಾಮ್ರದ ರಾಶಿ<br>(ತಾಮ್ರದ ವಿ.ರಾ.ಸ 0·0003 ಗ್ರಾಂ/ಕೂಲಂಬ್)<br>(A) 18 g (B) 1·8 g<br>(C) 1·08 g (D) 10·8 g<br>***ಉತ್ತರ :*** (C) — 1·08 g | 1 |
| 12. | ಬಾಯ್ಲನ ನಿಯಮವನ್ನು ನಿರೂಪಿಸಿ.<br>***ಉತ್ತರ :***<br>"ಸ್ಥಿರ ತಾಪದಲ್ಲಿ, ನಿರ್ದಿಷ್ಟ ರಾಶಿಯ ಅನಿಲದ ಗಾತ್ರವು ಅದರ ಒತ್ತಡಕ್ಕೆ ವಿಲೋಮಾನುಪಾತದಲ್ಲಿರುತ್ತದೆ." | 1 |
| 15. | ಇವುಗಳಲ್ಲಿ ಆಧುನಿಕ ಆವರ್ತಕೋಷ್ಟಕದ ಒಂದೇ ಆವರ್ತಕ್ಕೆ ಸೇರುವ ಧಾತುಗಳನ್ನು ಆಯ್ಕೆ ಮಾಡಿ.<br>ಧಾತು: ಹೈಡ್ರೋಜನ್, ಸೋಡಿಯಂ, ಕಾರ್ಬನ್, ಸಿಲಿಕಾನ್<br>ಪರಮಾಣು ಸಂಖ್ಯೆ: 1, 11, 6, 14<br>***ಉತ್ತರ :***<br>ಸೋಡಿಯಂ (11 ), ಸಿಲಿಕಾನ್ (14)<br>(ಎರಡೂ ಧಾತುಗಳನ್ನು ಬರೆಯಬೇಕು) | 1 |

Table for Q15:

| ಧಾತು | ಹೈಡ್ರೋಜನ್ | ಸೋಡಿಯಂ | ಕಾರ್ಬನ್ | ಸಿಲಿಕಾನ್ |
|---|---|---|---|---|
| ಪರಮಾಣು ಸಂಖ್ಯೆ | 1 | 11 | 6 | 14 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | ಕಾಗದ ತಯಾರಿಕೆಯ ನಾಲ್ಕು ಹಂತಗಳನ್ನು ತಿಳಿಸಿ.<br>**ಅಥವಾ**<br>ಗಾಜು ತಯಾರಿಕೆಯ ನಾಲ್ಕು ಹಂತಗಳನ್ನು ತಿಳಿಸಿ.<br>***ಉತ್ತರ :***<br>i) ಪಲ್ಪಿಂಗ್ / ತಿರುಳು ಬೇರ್ಪಡಿಸುವುದು<br>ii) ಮಿಶ್ರಕ ಬೆರೆಸುವುದು<br>iii) ಒಣಗಿಸುವಿಕೆ<br>iv) ಮುಕ್ತಾಯ ಹಂತ 4 × ½ | 2 |
| | **ಅಥವಾ**<br>i) ದ್ರವನ<br>ii) ಆಕಾರ ನೀಡುವುದು<br>iii) ಅನೀಲನ ಕ್ರಿಯೆ<br>iv) ಮುಕ್ತಾಯ ಹಂತ 4 × ½ | 2 |
| 21. | ಪರಮಾಣು ಗಾತ್ರ ಎಂದರೇನು ? ಆಧುನಿಕ ಆವರ್ತಕೋಷ್ಟಕದ ಆವರ್ತದಲ್ಲಿ ಎಡದಿಂದ ಬಲಕ್ಕೆ ಸಾಗಿದಂತೆ ಹಾಗೂ ವರ್ಗದ ಕೆಳಗೆ ಬಂದಂತೆ ಪರಮಾಣು ಗಾತ್ರ ಹೇಗೆ ಬದಲಾಗುತ್ತದೆ ?<br>***ಉತ್ತರ :***<br>*ಪರಮಾಣು ಗಾತ್ರ :* ಪರಮಾಣುವಿನ ಕೇಂದ್ರ ಮತ್ತು ಅದರ ಅತ್ಯಂತ ಹೊರ ಕವಚದ ನಡುವಣ ಅಂತರ. 1<br>ಆವರ್ತದ ಎಡದಿಂದ ಬಲಕ್ಕೆ ಸಾಗಿದಂತೆ ಪರಮಾಣು ಗಾತ್ರ ಕಡಿಮೆಯಾಗುವುದು. ½<br>ವರ್ಗದ ಕೆಳಗೆ ಬಂದಂತೆ ಪರಮಾಣು ಗಾತ್ರ ಹೆಚ್ಚಾಗುವುದು. ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

24. ವಿದ್ಯುದ್ವಿಭಜನೀಯತೆಯಲ್ಲಿ ಉಪಯೋಗಿಸುವ ಉಪಕರಣದ ಚಿತ್ರವನ್ನು ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ.

(a) ಅಮ್ಮೀಟರ್

(b) ಆ್ಯನೋಡ್

***ಉತ್ತರ :***




a) ಆಮ್ಮೀಟರ್

b) ಆ್ಯನೋಡ್ — 2

26. ಸಿಲಿಕಾನ್‌ನಿಂದ ಕಾರ್ಬೋರಂಡಮ್ ತಯಾರಿಸುವ ಕ್ರಿಯೆಯನ್ನು ಸೂಚಿಸುವ ರಾಸಾಯನಿಕ ಸಮೀಕರಣವನ್ನು ಬರೆಯಿರಿ. ಕಾರ್ಬೋರಂಡಮ್‌ನ ಒಂದು ಉಪಯೋಗವನ್ನು ಬರೆಯಿರಿ.

***ಉತ್ತರ :***

Si + C = SiC — 1

*ಉಪಯೋಗಗಳು :*

i) ಕತರಿ ಚಾಕುಗಳನ್ನು ಹರಿತ ಮಾಡುವ ಚಕ್ರದಲ್ಲಿ

ii) ಗ್ರಾನೈಟನ್ನು ಪಾಲಿಶ್ ಮಾಡಲು

iii) ಕತ್ತರಿಸುವ ಮತ್ತು ಉಜ್ಜುವ ಸಾಧನಗಳಲ್ಲಿ

iv) ಸೀಸದ ಕಡ್ಡಿಯನ್ನು ಚೂಪು ಮಾಡಲು

(ಯಾವುದಾದರೂ ಎರಡು) — ½ + ½ — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

30. (a) ಹುದುಗುವಿಕೆ ಎಂದರೇನು ? ಹುದುಗುವಿಕೆಯಲ್ಲಿ ಸಾಮಾನ್ಯವಾಗಿ ಉತ್ಪತ್ತಿಯಾಗುವ ಅನಿಲವನ್ನು ಹೆಸರಿಸಿ.

(b) ಸಬ್‌ಸ್ಟ್ರ್ಯಾಟ್ ಎಂದರೇನು ?

**ಅಥವಾ**

(a) ಕಾಕಂಬಿ ಎಂದರೇನು ?

(b) ಕೆರಾಮಲ್‌ನ ಎರಡು ಉಪಯೋಗಗಳನ್ನು ತಿಳಿಸಿ.

***ಉತ್ತರ :***

a) *ಹುದುಗುವಿಕೆ :* "ಕೆಲವು ಸಾವಯವ ವಸ್ತುಗಳ ಮೇಲೆ ಸೂಕ್ಷ್ಮಜೀವಿಗಳು ವರ್ತಿಸಿ ಉಂಟುಮಾಡುವ ರಾಸಾಯನಿಕ ಕ್ರಿಯೆ." 1

ಅನಿಲ : ಕಾರ್ಬನ್ ಡೈಆಕ್ಸೈಡ್ ½

b) *ಸಬ್‌ಸ್ಟ್ರ್ಯಾಟ್ :* ಹುದುಗುವಿಕೆಗೆ ಒಳಪಡುವ ವಸ್ತು. ½ — 2

**ಅಥವಾ**

a) *ಕಾಕಂಬಿ :* "ಸಕ್ಕರೆ ತಯಾರಿಕೆಯಲ್ಲಿ ಸ್ಫಟಿಕೀಕರಣಗೊಳ್ಳದೇ ಉಳಿಯುವ ಕಂದು ಬಣ್ಣದ ಸಾಂದ್ರವಾದ ಪಾಕ." 1

b) i) ಸಂರಕ್ಷಕವಾಗಿ

ii) ಆಹಾರಕ್ಕೆ ವಿಶಿಷ್ಟ ಬಣ್ಣ ಮತ್ತು ಸ್ವಾದ ನೀಡಲು

iii) ಮಿಠಾಯಿ, ಚಾಕಲೇಟುಗಳ ಹೊರಲೇಪನಕ್ಕೆ

(ಯಾವುದಾದರೂ ಎರಡು) ½ + ½ — 2

32. ಜೌಗು ಅನಿಲದ ಅಣುಸೂತ್ರ ಮತ್ತು ರಚನಾ ಸೂತ್ರ ಬರೆಯಿರಿ. ಇದನ್ನು ಜೌಗು ಅನಿಲವೆಂದು ಏಕೆ ಕರೆಯುತ್ತಾರೆ ?

**ಅಥವಾ**

ಗ್ರಾಫೈಟ್ ಮತ್ತು ವಜ್ರಗಳನ್ನು ಕಾರ್ಬನ್‌ನ ಬಹುರೂಪಗಳು ಎನ್ನುತ್ತಾರೆ. ಏಕೆ ? ಕೃತಕವಾಗಿ ಸಂಶ್ಲೇಷಿಸಲಾದ ಕಾರ್ಬನ್‌ನ ಎರಡು ಬಹುರೂಪಗಳನ್ನು ಹೆಸರಿಸಿ.

***ಉತ್ತರ :***

$CH_4$ : ½



½

ಜೌಗು ನೆಲದಲ್ಲಿ ಬ್ಯಾಕ್ಟೀರಿಯಾಗಳು ಸಸ್ಯಕಾಯವನ್ನು ವಿಘಟಿಸುವ ಮೂಲಕ ಇದು ಉತ್ಪತ್ತಿಯಾಗುವುದರಿಂದ. 1 — 2

**ಅಥವಾ**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇವು ಒಂದೇ ರೀತಿಯ ರಸಾಯನಿಕ ಗುಣಗಳನ್ನು ಹೊಂದಿದ್ದು, ಬೇರೆ ಬೇರೆ ಭೌತ ಗುಣಗಳನ್ನು ಹೊಂದಿರುವುದರಿಂದ. 1<br>ಫುಲರಿನ್ ½<br>ಗ್ರಾಫಿನ್ ½ | 2 |
| 33. | ಒಬ್ಬ ವಿದ್ಯಾರ್ಥಿಯು ಪ್ರಯೋಗಶಾಲೆಯಲ್ಲಿ ತಾಮ್ರದ ಚೂರುಗಳಿರುವ ಪ್ರನಾಳಕ್ಕೆ ನೈಟ್ರಿಕ್ ಆಮ್ಲವನ್ನು ಸೇರಿಸಿ, ಪ್ರನಾಳದಲ್ಲಿ ಆಗುವ ಬದಲಾವಣೆಯನ್ನು ಗಮನಿಸುತ್ತಾನೆ ಮತ್ತು ಪ್ರನಾಳಕ್ಕೆ ಸೇರಿಸಿದ ಆಮ್ಲವು ತಕ್ಕಮಟ್ಟಿನ ಸಾರೀಕೃತ ನೈಟ್ರಿಕ್ ಆಮ್ಲವೆಂಬ ಸರಿಯಾದ ತೀರ್ಮಾನಕ್ಕೆ ಬಂದಿದ್ದಾನೆ. ಆ ವಿದ್ಯಾರ್ಥಿಯ ತೀರ್ಮಾನಕ್ಕೆ ವೈಜ್ಞಾನಿಕ ಕಾರಣಗಳನ್ನು ಕೊಡಿ. ಈ ಕ್ರಿಯೆಯನ್ನು ಸೂಚಿಸುವ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ.<br>***ಉತ್ತರ :***<br>ತಕ್ಕಮಟ್ಟಿನ ಸಾರೀಕೃತ ನೈಟ್ರಿಕ್ ಆಮ್ಲ ಮತ್ತು ತಾಮ್ರದ ಚೂರುಗಳ ವರ್ತನೆಯಿಂದ ಪ್ರತಿವರ್ತಕ ಮತ್ತು ಪ್ರನಾಳದ ಬಾಯಿಯವರೆಗಿನ ಜಾಗದಲ್ಲಿ ಬಣ್ಣರಹಿತ ನೈಟ್ರಿಕ್ ಆಕ್ಸೈಡ್ ಅನಿಲ ಮತ್ತು ಪ್ರನಾಳದ ಬಾಯಿಯ ಮೇಲೆ ಕಂದು ಬಣ್ಣದ ನೈಟ್ರೋಜನ್ ಡೈಆಕ್ಸೈಡ್ ಅನಿಲ ಕಾಣಿಸಿಕೊಂಡಿರುವುದೇ ಈ ನಿರ್ಧಾರಕ್ಕೆ ಕಾರಣ. 1<br>$3Cu + 8HNO_3 \rightarrow 3Cu(NO_3)_2 + 2NO\uparrow + 4H_2O$ 1 | 2 |
| 38. | ಅಲ್ಯುಮಿನಾದಿಂದ ಅಲ್ಯುಮಿನಿಯಂನ ಉದ್ಧರಣದಲ್ಲಿ ಉಪಯೋಗಿಸುವ ಉಪಕರಣದ ಚಿತ್ರವನ್ನು ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.<br>(a) ಗ್ರಾಫೈಟ್ ಸರಳುಗಳಿಗೆ ಸಂಪರ್ಕಿಸಿರುವ ವಿದ್ಯುದಗ್ರ<br>(b) ದ್ರವಿತ ಅಲ್ಯುಮಿನಿಯಂ<br>***ಉತ್ತರ :***<br><br><br>2<br>a) ಗ್ರಾಫೈಟ್ ಸರಳುಗಳಿಗೆ ಸಂಪರ್ಕಿಸಿರುವ ವಿದ್ಯುದಗ್ರ → ಆ್ಯನೋಡ್<br>b) ದ್ರವಿತ ಅಲ್ಯುಮಿನಿಯಂ ½ + ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

41. (a) ಎಣ್ಣೆಗಳನ್ನು ಘನಕೊಬ್ಬುಗಳನ್ನಾಗಿ ಏಕೆ ಪರಿವರ್ತಿಸುತ್ತಾರೆ ? ಈ ಕ್ರಿಯೆಯಲ್ಲಿ ನಿಕ್ಕಲ್‌ನ ಪಾತ್ರವೇನು ?

(b) ಆಲ್ಕೀನ್ ಮತ್ತು ಆಲ್ಕೈನುಗಳ ನಾಲ್ಕನೆ ಸದಸ್ಯರ ಅಣುಸೂತ್ರ ಮತ್ತು ರಚನಾ ಸೂತ್ರವನ್ನು ಬರೆಯಿರಿ.

**ಅಥವಾ**

(a) ಗ್ಲಿಸರಾಲ್ ಮತ್ತು ಸ್ಯಾಲಿಸಿಲಿಕ್ ಆಮ್ಲದ ರಚನಾ ಸೂತ್ರವನ್ನು ಬರೆಯಿರಿ.

(b) ಸಾಬೂನೀಕರಣ ಪ್ರಕ್ರಿಯೆಯ ಹಂತಗಳನ್ನು ವಿವರಿಸಿ.

***ಉತ್ತರ :***

a) i) ಪರ್ಯಾಪ್ತವಾಗಿಸಲು

ii) ಸಂಗ್ರಹ ಯೋಗ್ಯ ಕಾಲ ಹೆಚ್ಚಿಸಲು

iii) ಸಾಗಾಣಿಕೆ ಸುಲಭವಾಗಿಸಲು

(ಯಾವುದಾದರೂ ಎರಡು) ½ + ½

ನಿಕ್ಕಲ್ : ಕ್ರಿಯಾವರ್ಧಕವಾಗಿ 1

b) i) $C_5H_{10}$ : ½



½

ii) $C_5H_8$ : ½



½ | 4

**ಅಥವಾ**

a) i) *ಗ್ಲಿಸರಾಲ್ :*



1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | ii) *ಸ್ಯಾಲಿಸಿಲಿಕ್ ಆಮ್ಲ :*  ಅಥವಾ  | 1 | |
| b) | i) ಎಣ್ಣೆಗಳು ಅಥವಾ ಕೊಬ್ಬುಗಳು ಜಲವಿಭಜನೆಗೊಂಡು ಕಾರ್ಬಾಕ್ಸಿಲಿಕ್ ಆಮ್ಲ ಮತ್ತು ಗ್ಲಿಸರಾಲ್‌ಗಳು ಉಂಟಾಗುವುದು. | 1 | |
| | ii) ಕೊಬ್ಬಿನಾಮ್ಲಗಳು ಸೋಡಿಯಂ ಹೈಡ್ರಾಕ್ಸೈಡ್ ಅಥವಾ ಪೊಟ್ಯಾಸಿಯಂ ಹೈಡ್ರಾಕ್ಸೈಡ್‌ನಿಂದ ತಟಸ್ಥಗೊಂಡು ಕೊಬ್ಬಿನಾಮ್ಲಗಳ ಲವಣಗಳು ಉಂಟಾಗುವುದು. | 1 | 4 |